# ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು

ಆಡಳಿತಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು – 560 065.


ಸಂಖ್ಯೆ:ಆಕ/ವಯೋನಿವೃತ್ತಿ-2020/2019-20 ದಿನಾಂಕ:11-09-2019

## ಜ್ಞಾಪನ ಪತ್ರ

ವಿಷಯ: 2020ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದಲಿರುವ ಸರ್ಕಾರದ ಸೇವೆಯಲ್ಲಿದ್ದು ಕೃಷಿ ವಿಶ್ವವಿದ್ಯಾನಿಲಯಕ್ಕೆ ವರ್ಗವಾದಂತವರು ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಲಿರುವ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನಿವೃತ್ತಿಯ ಆದೇಶವನ್ನು ಪ್ರಕಟಿಸುವ – ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ:ಆಕ/ವಯೋನಿವೃತ್ತಿ-2019/2019-20 ದಿನಾಂಕ 12-07-2019.

******

ಮೇಲಿನ ಉಲ್ಲೇಖದ ಸುತ್ತೋಲೆ ಮೂಲಕ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ತಮ್ಮ ಆಡಳಿತದ ನಿಯಂತ್ರಣದಲ್ಲಿರುವ 2020ನೇ ಸಾಲಿನಲ್ಲಿ ವಯೋನಿವೃತ್ತಿ ಹೊಂದುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಮಾಹಿತಿಯನ್ನು ಆಡಳಿತಾಧಿಕಾರಿಗಳ ಕಛೇರಿಗೆ ದಿನಾಂಕ:31-08-2019ರ ಒಳಗೆ (ಕ್ರೋಢೀಕೃತ ಆದೇಶವನ್ನು ಪ್ರಕಟಿಸಲು) ಈ ಕೆಳಗೆ ಸೂಚಿಸಿರುವ ನಮೂನೆಯಲ್ಲಿ ಕಳುಹಿಸಿಕೊಡಬೇಕಾಗಿ ಸೂಚಿಸಲಾಗಿತ್ತು.

ಒಂದು ವೇಳೆ 2020ನೇ ವರ್ಷದಲ್ಲಿ ನಿವೃತ್ತಿ ಹೊಂದುವ ಬೋಧಕ/ಬೋಧಕೇತರರಾರೂ ಇರದಿದ್ದಲ್ಲಿ, **2020ನೇ ವರ್ಷದಲ್ಲಿ ವಯೋನಿವೃತ್ತಿ ಹೊಂದುವವರು ಯಾರೂ ಇಲ್ಲ"** ವೆಂದು ದೃಢೀಕರಣ ಪತ್ರವನ್ನು ಖಡ್ಡಾಯವಾಗಿ ಆಡಳಿತ ಕಛೇರಿಗೆ ಕಳುಹಿಸಿಕೊಡಲು ಸಹ ಸೂಚಿಸಲಾಗಿತ್ತು.

### ನಮೂನೆ

| ಕ್ರಮ ಸಂಖ್ಯೆ | ನೌಕರರ ಸಂಖ್ಯೆ | ಹೆಸರು ಮತ್ತು ಹುದ್ದೆ | ಹುಟ್ಟಿದ ದಿನಾಂಕ | ನಿವೃತ್ತಿ ಹೊಂದುವ ದಿನಾಂಕ | ತಿಂಗಳ ಕೊನೆಯ ದಿನದಂದು ನಿವೃತ್ತಿ ಹೊಂದಲು ಅನುಮತಿ ನೀಡಲಾಗಿದೆ. |
|---|---|---|---|---|---|
| | | | | | |
| | | | | | ಬಟವಾಡೆ ಅಧಿಕಾರಿಗಳು / ನಿಯಂತ್ರಣಾಧಿಕಾರಿಗಳು |

ಈ ಸಂಬಂಧವಾಗಿ ಆಡಳಿತ ಕಛೇರಿಯಲ್ಲಿ ಸ್ವೀಕೃತವಾಗಿರುವ ಎಲ್ಲಾ ಮಾಹಿತಿಗಳನ್ನು ಪರಿಶೀಲಿಸಲಾಗಿ, ಇನ್ನೂ ಕೆಲವು ಅಧಿಕಾರಿಗಳಿಂದ ಮಾಹಿತಿ ಬಂದಿಲ್ಲದಿರುವುದು ಗಮನಕ್ಕೆ ಬಂದಿದೆ. ಆದಕಾರಣದಿಂದ ಈ ಜ್ಞಾಪನ ಪತ್ರ ತಲುಪಿದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿಯನ್ನು ಈ ಕಛೇರಿಗೆ ಖಡ್ಡಾಯವಾಗಿ 27/09/2019ರ ಒಳಗೆ ಒದಗಿಸಲು ಕೋರಲಾಗಿದೆ

ಆಡಳಿತಾಧಿಕಾರಿಗಳು